ದಿನಾಂಕಃ 27.11.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: 2, 7 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಂ.ವಿ.ಜೆ. ವಕೀಲರಿಂದ:**

ದಾವ ಜಮೀನುಗಳ ಚೆಕ್ಕುಬಂದಿ ನನ್ನಿಂದ ಹೇಳಲು ಆಗುವುದಿಲ್ಲ. ವಾದಪತ್ರದಲ್ಲಿ ತೋರಿಸಿರುವ ದಾವ ಜಮೀನುಗಳ ಚೆಕ್ಕುಬಂದಿಗೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವ ಜಮೀನುಗಳ ಚೆಕ್ಕುಬಂದಿಗಳನ್ನು ತೋರಿಸಲು ಯಾವ ದಾಖಲೆಯನ್ನು ಹಾಜರುಪಡಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರಿಂದ 9 ರಲ್ಲಿ ದಾವ ಜಮೀನುಗಳ ಚೆಕ್ಕುಬಂದಿಯನ್ನು ನೋಡಿ ಹೇಳಲು ಆಗುವುದಿಲ್ಲ. 9 ನೇ ಪ್ರತಿವಾದಿ ನನ್ನ ಅಣ್ಣನ ಮಗ. ನಂದೀಪುರ ಗ್ರಾಮದ ಸ.ನಂ.43/1 ರಲ್ಲಿ 2 ಎಕರೆ 4 ಗುಂಟೆ 9 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಸರಿ. ಆ ಜಮೀನನ್ನು 2 ವರ್ಷದ ಹಿಂದೆ ಕ್ರಯಕ್ಕೆ ಪಡೆದು ಕಾಫೀ ಮತ್ತು ಸಿಲ್ವರ್ ಬೆಳೆಯುತ್ತಿದ್ದಾರೆ. ಈ ವಿಚಾರ ನನಗೆ ಕಳೆದ ವರ್ಷ ಗೊತ್ತಾಯ್ತು, ಆದರೆ ದಿನಾಂಕ ಗೊತ್ತಿಲ್ಲ. 9 ನೇ ಪ್ರತಿವಾದಿ ಜಮೀನು ಖರೀದಿಸಿರುವ ಬಗ್ಗೆ ಅವರ ಬಾಜುದಾರರಾದ ತಿಮ್ಮಪ್ಪ ರವರ ಮೂಲಕ ನನಗೆ ತಿಳಿಯಿತು. ನಾನು ತಿಮ್ಮಪ್ಪ ರವರೊಂದಿಗೆ ಚೆನ್ನಾಗಿದ್ದೇನೆ. ಸದರಿ ತಿಮ್ಮಪ್ಪ ರವರಿಂದ ಸಾಕ್ಷಿ ನುಡಿಸಲು ಪ್ರಯತ್ನಿಸುತ್ತೇನೆ.

ನಿಪಿ-1 ರಿಂದ 9 ರ ದಾಖಲೆಗಳು ಯಾವ ಯಾವ ದಾಖಲೆಗಳು ಎಂದು ನನ್ನಿಂದ ವಿವರವಾಗಿ ಹೇಳಲು ಆಗುವುದಿಲ್ಲ. ಸದರಿ ದಾಖಲೆಗಳನ್ನು ಪಡೆದು 2 ವರ್ಷವಾಗಿದೆ. ಆ ದಾಖಲೆಗಳನ್ನು ನನ್ನ ಗಂಡ ಸಂಬಂದಪಟ್ಟ ಕಚೇರಿಗಳಿಂದ ಪಡೆದುಕೊಂಡಿದ್ದರು. 9 ನೇ ಪ್ರತಿವಾದಿಗೆ ಸಂಬಂಧಪಟ್ಟ ಕ್ರಯಪತ್ರದ ನಕಲನ್ನು ಪಡೆದು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಪ್ರತಿವಾದಿಗಳ ನಡುವೆ ವಿಭಾಗವಾಗಿದೆ ಎಂದರೆ ಸರಿ. ಆ ರೀತಿ 20 ವರ್ಷದ ಹಿಂದೆಯೇ ನೋಂದಾಯಿತ ಪಾಲುಪತ್ರದ ಮೂಲಕ ವಿಭಾಗ ಮಾಡಿಕೊಂಡಿದ್ದಾರೆ. ಈ ಕಾರಣ ದಾವ ಜಮೀನುಗಳ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ 2 ನೇ ಪ್ರತಿವಾದಿಗೆ ಬಂದ ಜಮೀನನ್ನೇ ಅವರು 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನನ್ನ ವಿವಾಹಕ್ಕೂ ಮುನ್ನ ದಾವ ಜಮೀನುಗಳಲ್ಲಿ ಕೃಷಿ ಮಾಡುತ್ತಿದ್ದೆ, ಆದರೆ ಆನಂತರ ಮಾಡುತ್ತಿಲ್ಲ. ದಾವ ಜಮೀನುಗಳಲ್ಲಿ ಎಷ್ಟು ಕರಾಬು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ 9 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರದ ರದ್ದತಿಗಾಗಿ ನಾನು ದಾವೆ ಸಲ್ಲಿಸಿಲ್ಲ. 2 ನೇ ಪ್ರತಿವಾದಿ ಕಡಿಮೆ ಬೆಲೆಗೆ ತನ್ನ ಜಮೀನನ್ನು 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ. ಆ ಜಮೀನನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ್ದರೆ ನಮಗೂ ಸಹಾ ಹಣ ಬರುತ್ತಿತ್ತು ಎಂದು ನಾವು ಯೋಚಿಸಿದ್ದೆವು ಎಂದರೆ ಸರಿಯಲ್ಲ.

ಮೇಲೆ ಹೇಳಿದಂತೆ 9 ನೇ ಪ್ರತಿವಾದಿಗೆ ಕಡಿಮೆ ಬೆಲೆಗೆ ಜಮೀನು ಮಾರಾಟ ಮಾಡಿರುವುದಾಗಿ 2 ನೇ ಪ್ರತಿವಾದಿ ಮತ್ತು ಅವರ ಪತ್ನಿಯೇ ನನಗೆ ಹೇಳಿದ್ದರು. ರೂ.30,00,000/- ಹಣಕ್ಕೆ ಆ ಜಮೀನನ್ನು ಮಾರಾಟ ಮಾಡಿದ್ದರು ಎಂದು ನನಗೆ ತಿಳಿದುಬಂತು. ಸದರಿ ಜಮೀನಿನ ಮಾರಾಟ ದಿನಾಂಕದಂದು ಒಂದು ಎಕರೆ ಜಮೀನಿಗೆ ಸುಮಾರು ರೂ.25,00,000/- ಬೆಲೆ ಇದ್ದಿರಬಹುದು.

9 ನೇ ಪ್ರತಿವಾದಿ ಮಾರುಕಟ್ಟೆ ಬೆಲೆಗೆ 2 ನೇ ಪ್ರತಿವಾದಿಯಿಂದ ಜಮೀನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ಖರೀದಿಸಿರುವ ಜಮೀನು ಮೊದಲು ಖುಷ್ಕಿ ಜಮೀನಾಗಿತ್ತು ಎಂದರೆ ಸರಿಯಲ್ಲ. ಆ ಜಮೀನು 40 ವರ್ಷದ ಹಿಂದೆಯೇ ಕಾಫೀ ತೋಟವಾಗಿತ್ತು. ಕಾನೂನಿ ಪ್ರಕಾರವೇ 9 ನೇ ಪ್ರತಿವಾದಿ ಖರೀದಿಸಿರುವ ಜಮೀನಿನ ಖಾತೆ ಅವರ ಹೆಸರಿಗೆ ದಾಖಲಾಗಿದೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ಖರೀದಿಸಿರುವ ಜಮೀನಿನ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಜೀವಂತವಿರುವಾಗಲೇ ನನ್ನ ಸಹೋದರರು ವಿಭಾಗವಾಗಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಮೊದಲನೇ ಪತ್ನಿಯ ಮಗಳ ಮಕ್ಕಳನ್ನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿರವರಿಗೆ ಈ ದಾವೆ ಸಲ್ಲಿಸಿರುವ ವಿಚಾರ ಗೊತ್ತಿದೆ. ಪ್ರತಿವಾದಿಗಳು ವಿಭಾಗ ಮಾಡಿಕೊಳ್ಳುವಾಗ ನನ್ನ ತಂದೆಯ ಮೊದಲನೇ ಪತ್ನಿಯ ಮಗಳು ಜೀವಂತವಿದ್ದರು.

ದಾವ ಜಮೀನುಗಳು ನಮ್ಮ ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಈ ಕಾರಣ ನನಗೂ ಮತ್ತು 1 ನೇ ವಾದಿಗೆ ದಾವ ಜಮೀನುಗಳ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಕಾಫೀ ಜಮೀನುಗಳಿಗೆ ಬೆಲೆ ಜಾಸ್ತಿಯಾಗಿರುವ ಕಾರಣ ಅಕ್ರಮ ಲಾಭ ಗಳಿಸುವ ಉದ್ದೇಶಕ್ಕೆ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಪತ್ರ ಮತ್ತು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.